# ಸಿನಿಮಾ ಒಲವಿನ ಹುಬ್ಬಳ್ಳಿ ಹುಡುಗಿ

**ತೆಲುಗು, ತಮಿಳು, ಕನ್ನಡ ಸಿನಿಮಾಗಳಲ್ಲಿ ಅಭಿನಯಿಸಿರುವ ನಟಿ ಜಾನ್ವಿಕಾ ಕಲಕೇರಿ ಅವರಿಗೆ ಉತ್ತಮ ಕಥೆ, ಪಾತ್ರಗಳಲ್ಲಿ ತಮ್ಮನ್ನು ಪ್ರಯೋಗಿಸಿಕೊಳ್ಳಬೇಕೆಂಬ ಹಂಬಲ. ಅವರ ಅಭಿನಯದ 'ಲವ್ ಒಟಿಪಿ' ಸಿನಿಮಾ ತೆರೆಗೆ ಬರಲು ಸಜ್ಜಾಗುತ್ತಿದ್ದು, ಇದೇ ನೆಪದಲ್ಲಿ ಮಾತಿಗೆ ಸಿಕ್ಕಾಗ...**

■ **ಸುಮಲತಾ ಎನ್**

ಚಿಕ್ಕ ವಯಸ್ಸಿನಲ್ಲಿಯೇ ನಟನೆಯ ಗುಂಗು ಹತ್ತಿಸಿಕೊಂಡಿದ್ದ ಹುಬ್ಬಳ್ಳಿ ಚೆಲುವೆ ಜಾನ್ವಿಕಾ ಕಲಕೇರಿ, ಶಾಲೆ ಕಾಲೇಜಿನಲ್ಲಿ ಯಾವುದೇ ಕಾರ್ಯಕ್ರಮವಿರಲಿ, ಭಾಗವಹಿಸುವುದರಲ್ಲಿ ಸದಾ ಮುಂದು. ಚುರುಕಾಗಿ ಓಡಾಡಿಕೊಂಡು ನೃತ್ಯ, ನಾಟಕಗಳಲ್ಲಿ ತೊಡಗಿಕೊಂಡಿದ್ದ ಅವರಿಗೆ ಮೆಚ್ಚುಗೆ ಬರುವುದು ಕೂಡ ಸಹಜವೇ ಆಗಿತ್ತು. ಆ ಮೆಚ್ಚುಗೆಯೇ ನಟಿಸಬೇಕೆಂಬ ಹಂಬಲವನ್ನೂ ಹೆಚ್ಚು ಮಾಡಿತ್ತು.

ಅವರ ಹಂಬಲಕ್ಕೆ ಇಂಬು ನೀಡುವಂತೆ ಹತ್ತನೇ ತರಗತಿ ಮುಗಿಯುತ್ತಿದ್ದಂತೆ ಅಭಿನಯಿಸುವ ಅವಕಾಶಗಳೂ ಅರಸಿಬಂದವು. ಮೊದಲ ಹೆಜ್ಜೆಯಲ್ಲಿಯೇ ರವಿಚಂದ್ರನ್ ಅವರ ಪುತ್ರ ಮನುರಂಜನ್ ಅವರೊಂದಿಗೆ ಅಭಿನಯಿಸುವ ಅವಕಾಶ ಸಿಕ್ಕಿದ್ದು ಅವರ ಸಿನಿಮಾ ಕನಸಿಗೆ ರೆಕ್ಕೆ ಕಟ್ಟಿತ್ತು. 'ಪ್ರಾರಂಭ' ಸಿನಿಮಾ ಮೂಲಕ ತಮ್ಮ ಸಿನಿ ಜೀವನ ಪ್ರಾರಂಭಿಸಿದ ಜಾನ್ವಿಕಾಗೆ ಚಿತ್ರತಂಡವೇ ಎಲ್ಲ ರೀತಿಯ ತರಬೇತಿ ನೀಡಿದ್ದು ಸಿನಿಮಾರಂಗದಲ್ಲಿ ತಮ್ಮ ಭವಿಷ್ಯ ಕಂಡುಕೊಳ್ಳುವ ಆತ್ಮವಿಶ್ವಾಸವನ್ನು ಹೆಚ್ಚಿಸಿತ್ತು.

'ಪ್ರಾರಂಭ' ನಂತರ ನಟ ಶಶಿಕುಮಾರ್ ಪುತ್ರ ಅಕ್ಷಿತ್ ಶಶಿಕುಮಾರ್ ಅವರೊಂದಿಗೆ 'ಓ ಮೈ ಲವ್' ಸಿನಿಮಾದಲ್ಲಿ ನಟಿಸಿದ್ದು ಸಿನಿಮಾರಂಗದ ಮತ್ತೊಂದು ಮಜಲನ್ನು ಪರಿಚಯಿಸಿತ್ತು. ಈ ನಡುವೆ ತಮಿಳು ಸಿನಿಮಾದಲ್ಲಿಯೂ ಅಭಿನಯಿಸುವ ಅವಕಾಶ ಒದಗಿಬಂತು. ತೆಲುಗು ಭಾಷೆಯಲ್ಲಿಯೂ ತಮ್ಮ ಅದೃಷ್ಟ ಪರೀಕ್ಷಿಸಿ ಅಲ್ಲಿಯೂ ಸೈ ಎನಿಸಿಕೊಂಡರು. ಇದೀಗ ಕನ್ನಡದೆಡೆಗೆ ಮರಳಿದ್ದು, ನಟ ಅನೀಶ್ ತೇಜೇಶ್ವರ್ ಅವರೊಂದಿಗೆ 'ಲವ್ ಒಟಿಪಿ' ಸಿನಿಮಾದಲ್ಲಿ ನಟಿಸಿದ್ದಾರೆ. ಚಿತ್ರ ಇದೇ ನವೆಂಬರ್ 14ಕ್ಕೆ ಬಿಡುಗಡೆಯಾಗುತ್ತಿದೆ.

''ಲವ್ ಒಟಿಪಿ'ಯಲ್ಲಿ ನನ್ನದು ಸಾಮಾನ್ಯ ಹುಡುಗಿ ಪಾತ್ರ. ಫಿಸಿಯೊಥೆರಪಿಸ್ಟ್ ಆಗಿ ಕಾಣಿಸಿಕೊಳ್ಳುತ್ತಿದ್ದೇನೆ. ಮುದ್ದಾಗಿರುವಂಥ ಈ ಪಾತ್ರ ನೋಡುಗರಿಗೆ ಇಷ್ಟವಾಗಿಯೇ ಆಗುತ್ತದೆ. ಸಿನಿಮಾ ತೆಲುಗು, ಕನ್ನಡ ಎರಡೂ ಭಾಷೆಯಲ್ಲಿ ಬಿಡುಗಡೆಗೊಳ್ಳುತ್ತಿದೆ. ನಾನಂತೂ ಬಹಳ ಎಕ್ಸೈಟ್ ಆಗಿದ್ದೇನೆ'' ಎಂದು ಉತ್ಸುಕತೆ ವ್ಯಕ್ತಪಡಿಸಿದರು.

ಸಿನಿಮಾರಂಗದಲ್ಲಿನ ಸವಾಲುಗಳ ಬಗ್ಗೆ ತಮ್ಮ ಅನಿಸಿಕೆ ಹಂಚಿಕೊಂಡ ಅವರು, 'ಹೊಸಬರಿಗೆ ಒಳ್ಳೆಯ ಅವಕಾಶಗಳು ಸಿಗುವುದೇ ಬಹುದೊಡ್ಡ ಸವಾಲು. ತಮ್ಮಲ್ಲಿನ ಸಾಮರ್ಥ್ಯವನ್ನು ವ್ಯಕ್ತಪಡಿಸಲು ಉತ್ತಮ ಅವಕಾಶಗಳ ಅಗತ್ಯ ಹೊಸಬರಿಗೆ ಬಹಳ ಅವಶ್ಯವಿರುತ್ತದೆ. ಅವಕಾಶಗಳು ಬಂದರೂ ಆಯ್ಕೆಯ ವಿಷಯದಲ್ಲಿ ಎಡವಿದರೆ ಮತ್ತೂ ಸಮಸ್ಯೆಯಾಗುತ್ತದೆ' ಎಂದು ತಮ್ಮ ಅನುಭವವನ್ನು ತೆರೆದಿಟ್ಟರು.

ಬೇರೆ ಬೇರೆ ಭಾಷೆಗಳ ಹಲವು ಸಿನಿಮಾಗಳಲ್ಲಿ ನಟಿಸಿದ ನಂತರ ತಮ್ಮ ಅಭಿನಯ ಕಲೆಯನ್ನು ಹರಿತಗೊಳಿಸಿಕೊಂಡಿರುವ ಜಾನ್ವಿಕಾ, ಇದೀಗ ತಮ್ಮ ಆಯ್ಕೆಯಲ್ಲಿ ಬಹಳ ಎಚ್ಚರ ವಹಿಸುತ್ತಾರಂತೆ. ಪ್ರತಿ ಆಯ್ಕೆ ಕೂಡ ತಮ್ಮನ್ನು ವ್ಯಕ್ತಪಡಿಸುವ ಒಂದು ಅವಕಾಶವಾದ್ದರಿಂದ ಅದನ್ನು ಸಮರ್ಥವಾಗಿ ಬಳಸಿಕೊಳ್ಳಬೇಕೆಂಬ ಅನಿಸಿಕೆ ಅವರದ್ದು.

'ಮೊದಲು ಸಿನಿಮಾದ ಕಂಟೆಂಟ್ ಗಮನಿಸುತ್ತೇನೆ. ಚಿತ್ರಕಥೆ, ಸಿನಿಮಾದಲ್ಲಿನ ನನ್ನ ಪಾತ್ರದ ಪ್ರಾಮುಖ್ಯವನ್ನು ಅಳೆದು ತೂಗಿ, ನನ್ನ ಪಾತ್ರ ನನಗೆ ಬಹಳ ಇಷ್ಟವಾದರೆ ಮುಂದುವರೆಸುತ್ತೇನೆ' ಎಂದು ಹೇಳುವ ಅವರಿಗೆ ಐತಿಹಾಸಿಕ ಪಾತ್ರಕ್ಕೆ ಬಣ್ಣ ಹಚ್ಚಬೇಕೆಂಬ ಅಭಿಲಾಷೆ.

ಕನ್ನಡದಲ್ಲಿ ಮತ್ತೊಂದು ಸಿನಿಮಾ ಮಾತುಕತೆ ನಡೆಯುತ್ತಿದ್ದು, ಮೂರು ತೆಲುಗು, ಒಂದು ತಮಿಳು ಸಿನಿಮಾಗಳಲ್ಲಿ ತೊಡಗಿಕೊಂಡಿದ್ದಾರೆ ಜಾನ್ವಿಕಾ. ಹಿಂದಿ ಸಿನಿಮಾವೊಂದರಲ್ಲಿಯೂ ಅಭಿನಯಿಸಿದ್ದು, ಅದು ವರ್ಷಾಂತ್ಯಕ್ಕೆ ಬಿಡುಗಡೆಯಾಗುವ ನಿರೀಕ್ಷೆಯಿದೆ. ■

